ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾದಂ.ಗಳ
ನ್ಯಾಯಾಲಯ, ಶೋರಾಪುರ.

**ಸಿ.ಸಿ. ನಂ. 241 /2022**

| | | |
|---|---|---|
| ಸಾಕ್ಷಿದಾರರ ಹೆಸರು | ಃಭೀಮಪ್ಪ | ಸಿ.ಡಬ್ಲ್ಯೂಃ 01 |
| ತಂದೆ ಹೆಸರು | ಃಹಳ್ಳೆಪ್ಪ | ಪಿ.ಡಬ್ಲ್ಯೂಃ 01 |
| ವಯಸ್ಸು | ಃ35 ವರ್ಷ | |
| ವೃತ್ತಿ | ಃಕೂಲಿಕೆಲಸ | |
| ವಾಸ ಸ್ಥಳ | ಃಪರಸನಳ್ಳಿ | |

ಸಾಕ್ಷಿಗೆ ಇಂದು ದಿನಾಂಕಃ **29-06-2026** ರಂದು ಪ್ರಮಾಣ ವಚನ ಭೋಧಿಸಲಾಯಿತು.
ಮುಖ್ಯ ವಿಚಾರಣೆಃ ಸ.ಸ.ಅ.ರವರಿಂದಃ

ನ್ಯಾಯಾಲಯದ ಮುಂದಿರುವ ಆರೋಪಿತನು ನನಗೆ ಪರಿಚಯ ಇರುತ್ತಾರೆ ಚಾಸಾ -4 ನನ್ನ ತಂದೆಯಾಬೇಕು. ಚಾಸಾಃ 5 ರವರು ನನ್ನ ತಾಯಿಯಾಗಬೇಕು. ಚಾಸಾಃ 6 ಮತ್ತು 7 ರವರು ನನ್ನ ಅಣ್ಣಂದಿರಾಗಬೇಕು. ಆರೊಪಿತರಿಗೂ ಮತ್ತು ನಮಗೂ ಬಾಯಿ ಮಾತಿನ ಗಲಾಟೆಯಾಗಿದ್ದು ಹಾಗೂ ಪೊಲಿಸ ಠಾಣೆಗೆ ಹೋದಾಗ ಎರಡು ದಾಖಲೆಗಳಿಗೆ ಸಹಿ ಮಾಡಿರುತ್ತೇನೆ. ಸದರಿ ದಾಖಲೆಗಳು ದೂರು ಮತ್ತು ಪಂಚನಾಮೆಯಾಗಿದ್ದು ಅವುಗಳಲ್ಲಿರುವ ಸಹಿ ನನ್ನದಾಗಿರುತ್ತವೆ. ಸದರಿ ದೂರನ್ನು ನಿಪಿ-1 ಎಂದು, ಪಂಚನಾಮೆಯನ್ನು ನಿಪಿ-2 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-1(ಎ) ಮತ್ತು 2(ಎ) ಎಂದು ಗುರುತಿಸಲಾಯಿತು. ಸದರಿ ದೂರಿನಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಸ.ಸ.ಅ ರವರ ವಿನಂತಿ ಮೇರೆಗೆ ಪರಿಗಣಿಸಿ ಪಾಟೀ ಸವಾಲಿಗೆ ಅವಕಾಶ ನೀಡಲಾಯಿತು.)**

ಪಾಟೀ ಸವಾಲು ಃ ಅಭೀಯೊಜನೆ ಪರ ಸ.ಸ.ರವರಿಂದಃ

ದಿ.25.19-01-2022 ರಂದು ರಾತ್ರಿ 8.00 ಗಂಟೆ ಸುಮಾರಿಗೆ

ಆರೋಪಿತನು ಹಿಂದಿನ ಹಳೆಯ ದ್ವೇಷದಿಂದ ನಮ್ಮ ಮನೆಯೊಳಗೆ ಅಕ್ರಮವಾಗಿ ಪ್ರವೇಶ ಮಾಡಿ ನನ್ನ ತಂದೆಯಾದ ಚಾಸಾಃ 4 ರವರೊಂದಿಗೆ ಜಗಳ ತೆಗೆದು, ಅವಾಚ್ಯ ಶಬ್ದಗಳಿಂದ ಬೈದು ಕೈಯಿಂದ ಹೊಡೆ-ಬಡೆ ಮಾಡಿದ್ದಾನೆ ಎಂದರೆ ಸರಿಯಲ್ಲ. ಸದರಿ ಜಗಳದ ಸಪ್ಪಳ ಕೇಳಿ ಚಾಸಾಃ 5 ರಿಂದ 7 ರವರು ಬಂದು ಗಜಳ ಬಿಡಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತನು ಚಾಸಾಃ 1 ರವರಿಗೆ ಇದೊಂದು ಸಲ ಉಳಿದಿದ್ದಿ ಇನ್ನೊಂದು ಸಾರಿ ಸಿಗು ಜೀವ ಸಹಿತ ಬಿಡುವುದಿಲ್ಲ ಎಂದು ಜಿವೇ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಈಗ ಮೇಲೆ ಓದಿ ಹೇಳಲಾದಂತೆ ನಿಪಿ-1 ರಂತೆ ಪೊಲಿಸರಿಗೆ ದೂರು ನೀಡಿದ್ದೇನೆ ಎಂದರೆ ಸರಿಯಲ್ಲ.

ದಿನಾಂಕಃ 26-01-2026 ರಂದು ಮದ್ಯಾಹ್ನ 3.00 ರಿಂದ 4.00 ಗಂಟೆಯ ಅವಧಿಯಲ್ಲಿ ನಾನು ತೋರಿಸಿದ ಘಟನಾ ಸ್ಥಳದಲ್ಲಿ ಚಾಸಾಃ 2 ಮತ್ತು 3 ರವರ ಸಮಕ್ಷಮ ನಿಪಿ-2 ರಂತೆ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಈಗ ಆರೋಪಿತರೊಂದಿಗೆ ರಾಜಿಯಾಗಿದ್ದೇನೆ ಎಂದರೆ ಸರಿ. ಆ ಕಾರಣಕ್ಕಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ.

(ಸಾಕ್ಷಿದಾರರ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಶೋರಾಪುರ.